VIDYAVARDHAKA LAW COLLEGE LIBRARY MYSURU



## Second Semester of Three Year LL.B. Examination, June 2011
## FAMILY LAW – II
## Mohammaden Law and Indian Succession Act (Course – V)

Duration : 3 Hours                                                  Max. Marks : 100

**Instructions :** 1. Answer **all 5** Questions.
2. Figures to the **right** indicate marks.
3. Answers should be written **either** in English or Kannada **completely**.

### UNIT – I

Q. No. 1. (a) State the provisions of the Shariat Act, 1937. Marks : 15

1937 ರ ಷರಿಯತ್ ಅಧಿನಿಯಮದ ಉಪಬಂಧಗಳನ್ನು ತಿಳಿಸಿ.

OR/ಅಥವಾ

State the essentials of a valid marriage under Muslim law.

ಮುಸ್ಲಿಂ ಕಾನೂನಿನ ಪ್ರಕಾರ ಒಂದು ಊರ್ಜಿತ ವಿವಾಹದ ಅವಶ್ಯಕತೆಗಳನ್ನು ತಿಳಿಸಿರಿ.

(b) 'A' a Hanafi Muslim has four wives. He marries the fifth wife. Is the fifth marriage valid ? Marks : 5

'ಅ' ಎನ್ನುವ ಹನಾಫಿ ಮುಸ್ಲಿಮನಿಗೆ ನಾಲ್ವರು ಹೆಂಡತಿಯರಿರುತ್ತಾರೆ. ಆತನು ಐದನೆಯ ಮದುವೆ ಮಾಡಿಕೊಳ್ಳುತ್ತಾನೆ. ಐದನೆ ಮದುವೆಯು ಊರ್ಜಿತವೇ ?

OR/ಅಥವಾ

A Muslim wife want to claim Mahr from her husband inspite of having an express agreement between them not to claim it. Can she claim ?

ಒಬ್ಬ ಮುಸ್ಲಿಂ ಹೆಂಡತಿಯು ಅವರ ಮಧ್ಯೆ ಮೆಹರನ್ನು ಕೇಳದಿರಲು ವ್ಯಕ್ತ ಒಪ್ಪಂದ ಇದ್ದರೂ ಸಹ ತನ್ನ ಪತಿಯಿಂದ ಅದನ್ನು ಕೇಳಲು ಇಚ್ಛಿಯಿಸುತ್ತಾಳೆ ? ಅವಳು ಅದನ್ನು ಕೇಳಬಲ್ಲಳೇ ?

### UNIT – II

Q. No. 2. (a) Who is a Muslim ? Explain the rules relating to conversion to Islam. Marks : 15

ಮುಸ್ಲಿಂ ಎಂದರೆ ಯಾರು ? ಇಸ್ಲಾಂ ಧರ್ಮದ ಮತಾಂತರಕ್ಕೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

OR/ಅಥವಾ

Who are entitled to be the guardians of the person and property of a minor under Mohammaden law ?

ಮಹಮ್ಮದೀಯ ಕಾನೂನಿನ ಪ್ರಕಾರ ಅಪ್ರಾಪ್ತ ವಯಸ್ಕ ಮತ್ತು ಅವನ ಆಸ್ತಿಗೆ ಯಾರು ಸಂರಕ್ಷಕರಾಗಲು ಅರ್ಹರು ?

(b) Write a note on parental rights. Marks : 5

ತಾಯಿ ತಂದೆಗಳ ಹಕ್ಕಿನ ಮೇಲೆ ಒಂದು ಟಿಪ್ಪಣಿ ಬರೆಯಿರಿ.

OR/ಅಥವಾ

When can a legal guardian dispose the immovable properties of a minor ?

ಯಾವಾಗ ಕಾನೂನೀ ಸಂರಕ್ಷಕನು ಅಪ್ರಾಪ್ತ ವಯಸ್ಕನ ಸ್ಥಿರಾಸ್ತಿಗಳನ್ನು ವಿಲೆ ಮಾಡಬಹುದು ?

## UNIT – III

Q. No. 3. (a) How is divorce effected under Mohammaden law ? Discuss briefly the modes of divorce. Marks : 15

ಮಹಮ್ಮದೀಯ ಕಾನೂನಿನಲ್ಲಿ ವಿವಾಹ ವಿಚ್ಛೇದನವು ಯಾವ ರೀತಿ ಮಾಡಲ್ಪಡುತ್ತದೆ ? ವಿವಾಹ ವಿಚ್ಛೇದನದ ವಿವಿಧ ರೀತಿಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

OR/ಅಥವಾ

Write an essay on Shah Banu's case and its consequences.

ಶಾಹಬಾನು ಪ್ರಕರಣ ಹಾಗೂ ಅದರ ಪರಿಣಾಮಗಳ ಬಗ್ಗೆ ಒಂದು ಪ್ರಬಂಧ ಬರೆಯಿರಿ.

(b) Write a note on 'connivance' as a bar to matrimonial relief. Marks : 5

'ಪರೋಕ್ಷಸಮ್ಮತಿ' ಒಂದು ನಿಷೇಧಿತ ವೈವಾಹಿಕ ಪರಿಹಾರ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Write a note on alimony under Indian Divorce Act.

ಭಾರತೀಯ ವಿವಾಹ ವಿಚ್ಛೇದ ಕಾಯ್ದೆಯಡಿ ಜೀವನಾಂಶದ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – IV

Q. No. 4. (a) Explain the general principles of inheritance under Sunni law. Marks : 15

ಸುನ್ನಿ ಕಾನೂನಾನ್ವಯ ವಾರಸಕ್ಕೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ವಿವರಿಸಿ.

OR/ಅಥವಾ

Who is an administrator ? What are his powers and duties ?

ಆಡಳಿತಗಾರನೆಂದರೆ ಯಾರು ? ಅವನ ಅಧಿಕಾರ ಮತ್ತು ಕರ್ತವ್ಯಗಳಾವುವು ?



(b) A testator draws a line across his will and writes on the back of it 'this will is revoked'. Does it amount to revocation of will ? Marks : 5

ಮರಣಶಾಸಕನು ತನ್ನ ಮರಣಶಾಸನದ ಮೇಲೆ ಅಡ್ಡ ಗೆರೆಯನ್ನು ಎಳೆದು ಅದರ ಹಿಂಬದಿಗೆ 'ಇದನ್ನುರದ್ದುಗೊಳಿಸಲಾಗಿದೆ' ಎಂದು ಬರೆಯುತ್ತಾನೆ. ಇದರಿಂದ ಮರಣಶಾಸನ ರದ್ದಾಗುವದೆ?

OR/ಅಥವಾ

'A' an Indian Christian dies leaving behind two sons and a daughter. Distribute the property.

'ಅ' ಎಂಬ ಭಾರತೀಯ ಕ್ರೈಸ್ತನು ಇಬ್ಬರು ಗಂಡು ಮಕ್ಕಳು ಹಾಗೂ ಓರ್ವ ಹೆಣ್ಣು ಮಗಳನ್ನು ಬಿಟ್ಟು ಮೃತನಾಗುತ್ತಾನೆ. ಆಸ್ತಿಯನ್ನು ಹಂಚಿರಿ.

## UNIT – V

Q. No. 5. (a) Define will. Explain how privileged will is executed ? Marks : 15

ಮರಣ ಶಾಸನವನ್ನು ವ್ಯಾಖ್ಯಾನಿಸಿರಿ. ಹೇಗೆ ವಿಶೇಷ ಅಧಿಕಾರವುಳ್ಳ ಮರಣ ಶಾಸನಗಳನ್ನು ಜಾರಿಗೊಳಿಸಬಹುದು ? ವಿವರಿಸಿ.

OR/ಅಥವಾ

Discuss the need for Uniform Civil Code.

ಏಕರೂಪ ನಾಗರೀಕ ಸಂಹಿತೆಯ ಅವಶ್ಯಕತೆಯನ್ನು ಚರ್ಚಿಸಿ.

(b) 'A' bequeaths to 'B' Rs. one lakh to be paid at the death of 'C'. A dies and is survived by 'B' and 'C'. When does the legacy vest in 'B' ? Marks : 5

'ಅ' ನು 'ಬ'ನಿಗೆ 'ಸ'ನ ಮರಣದ ನಂತರ ಒಂದು ಲಕ್ಷ ರೂಪಾಯಿ ಸಿಗುವಂತೆ ಮರಣ ಶಾಸನ ಮಾಡುತ್ತಾನೆ. 'ಅ' ನು 'ಬ' ಮತ್ತು 'ಸ' ಇವರ ಜೀವಿತಾವಧಿಯಲ್ಲಿ ಮರಣ ಹೊಂದುತ್ತಾನೆ. ಮರಣ ಶಾಸನದಾನತ್ವ ಯಾವಾಗ 'ಬ'ಗೆ ಸೇರುತ್ತದೆ ?

OR/ಅಥವಾ

A sum of money is bequeathed to 'A' on his completing his eighteenth year and in case of his death, before he completes his eighteenth year, to 'B'. 'A' completes his eighteenth year and dies in life time of the testator. Does the legacy for 'A' lapse ?

'ಅ'ನು ಹದಿನೆಂಟನೆ ವಯಸ್ಸಿನವನಾದಾಗ ಅವನಿಗೆ ಒಂದು ಮೊಬಲಗನ್ನು ಮರಣ ಶಾಸನದ ಮೂಲಕ ಕೊಡಲಾಗಿದೆ. ಒಂದು ವೇಳೆ 'ಅ'ನು ಹದಿನೆಂಟು ವಯಸ್ಸಿಗಿಂತ ಮುಂಚಿತವಾಗಿ ತೀರಿಕೊಂಡರೆ ಅದು 'ಬ'ನಿಗೆ ಸೇರುತ್ತದೆ. 'ಅ'ನು ಹದಿನೆಂಟು ವರ್ಷ ಪೂರ್ಣಗೊಳಿಸಿ ಮರಣಶಾಸನಕರ್ತನ ಜೀವಿತಾವಧಿಯಲ್ಲಿಯೇ ಮರಣಹೊಂದುತ್ತಾನೆ. ಮರಣಶಾಸನದ ಮೂಲಕ 'ಅ'ನಿಗೆ ಕೊಟ್ಟ ಸ್ವತ್ತು ರದ್ದಾಗುವುದೆ ?

---